
ಭೋಜನಾರ್ಥಿಯಾಗಿ ಬಂದ. ಅರ್ಧದಲ್ಲೇ ಅನ್ನ ಬಿಟ್ಟು ಹೋದವನನ್ನು ಕುಮಾರವ್ಯಾಸ ಹಿಂಬಾಲಿಸಿ, ಅವನ ಮನವೊಲಿಸಿ 'ಭಾರತ ಕಥಾಮಂಜರಿ' ಕತೆ ಹೇಳಿಸಿಕೊಂಡನಂತೆ. ಆದರೆ ಕುಮಾರವ್ಯಾಸನು ಭಾರತ ಕಥನದ ಕಡೆಯಲ್ಲಿ ಅಶ್ವತ್ಥಾಮನಿಗೆ ಯಾವ ವಿನಾಯಿತಿಯನ್ನು ತೋರದೆ ಮತ್ತೆ ಅವನನ್ನು ಶಿಶುಹತ್ಯಾ ದೋಷಿಯನ್ನಾಗಿಸಿಬಿಟ್ಟಿದ್ದಾನೆ.



★★★

ವ್ಯಾಸರಿಂದ ಮೊದಲುಗೊಂಡು ಪಂಪ, ರನ್ನ, ಕುಮಾರವ್ಯಾಸರೆಲ್ಲ ಯುದ್ಧ ವಿರೋಧಿ ಸಂಗತಿಗಳನ್ನು ಹೇಳುತ್ತಾ, ಧರ್ಮ, ಅರ್ಥ, ಕಾಮ ಇವು ಸರಿಯಾಗಿ ಮನುಷ್ಯ ಜಗತ್ತಿನಿಂದ ಉಪಭೋಗವಾಗಬೇಕು ಎಂತಲೇ ಹೇಳುತ್ತಾ ಬಂದಿದ್ದಾರೆ. ರನ್ನನು ಗದಾಯುದ್ಧದಲ್ಲಿ ಪ್ರಸ್ತಾಪಿಸುವ ಯುದ್ಧ ದುರಂತದ ವಿಷಾದ ಪ್ರಸಂಗಗಳೆಲ್ಲವೂ ವ್ಯಾಸರ ಗದಾಪರ್ವದಲ್ಲಿ, ಪಂಪನ 'ವಿಕ್ರಮಾರ್ಜುನ ವಿಜಯ' 13ನೇ ಆಶ್ವಾಸದಲ್ಲಿ, ಭಟ್ಟ ನಾರಾಯಣನ ವೇಣಿ ಸಂಹಾರ, ಭಾಸನ ಊರು ಭಂಗ ನಾಟಕಗಳಲ್ಲಿ ಕಾಣಿಸಿಕೊಳ್ಳುತ್ತದೆ. ಒಬ್ಬ ಕವಿ ಇನ್ನೊಬ್ಬನಿಂದ ಕಥನ ಪ್ರಸಂಗಗಳನ್ನು ಎರವಲು ಪಡೆದ ಎನ್ನುವುದಕ್ಕಿಂತ ರಾಜ ಮಹಾರಾಜರಿಗೆ ಎಲ್ಲ ಕಾಲಕ್ಕೆ ಹೇಳಬೇಕಾದ ಮುಖ್ಯ ಸಂಗತಿಗಳು ಇವು ಎಂಬುದು ಕವಿಗಳ ನಿಲುವು.

ಕೊಂದು ರಾಜ್ಯಭಾರ ಮಾಡುವುದು ಸಾಧ್ಯವಿಲ್ಲ ಎಂದೂ, ಅಮಾನವೀಯತೆಯ ನೆಲೆಯಲ್ಲಿ ಸಾಧಿಸಿದ ಸಿಂಹಾಸನ ಹಿಂಸಾತ್ಮಕವಾದುದೆಂದೂ ಹೇಳಬೇಕಾಗಿದ್ದಿತು. ಹಾಗಾಗಿಯೇ ಕುರುಕ್ಷೇತ್ರ ಯುದ್ಧಾನಂತರ ಗೆದ್ದ ಧರ್ಮರಾಯನಿಗೆ ಹಸ್ತಿನಾವತಿಯನ್ನು ಆಳುವುದು ಹೇಗೆಂಬ ಚಿಂತೆ ಹತ್ತಿಕೊಂಡಿತು. ಅದನ್ನೇ ಜನಪದರು 'ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲ' ಎಂಬ ಮಾತೃಕಾ ರೂಪದ ನುಡಿಗಟ್ಟನ್ನು ಸೃಷ್ಟಿಸಿಬಿಟ್ಟರು. ಎಲ್ಲಾ ಕಾಲಕ್ಕೂ ರಾಜಮಹಾರಾಜರುಗಳ ಮಾನಹಾನಿಗಿಂತ ಜನಪದರು ಅನುಭವಿಸಿದ ಜೀವಹಾನಿಯೇ ದೊಡ್ಡದು. ಈ ಹಿನ್ನೆಲೆಯಲ್ಲಿ ಹಳಗನ್ನಡ ಕಾವ್ಯಗಳ ಅನೇಕಾನೇಕ ಮುಖ್ಯ ಭಾಗಗಳನ್ನು ಮತ್ತೆ ಮತ್ತೆ ಅವಲೋಕಿಸಿ ವ್ಯಾಖ್ಯಾನಿಸಬೇಕಿದೆ.

## ಕೃಷ್ಣಮೂರ್ತಿ ಹನೂರು

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ (ಚಾಮರಾಜ ನಗರ) ಸಂದರ್ಶಕ ಪ್ರಾಧ್ಯಾಪಕರು. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ', 'ಕಳೆದ ಮಂಗಳವಾರ ಮುಸ್ಸಂಜೆ' ಎಂಬ ಕಥಾಸಂಕಲನಗಳನ್ನು, 'ಬಾರೋ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ', 'ಸಿದ್ಧಿಯ ಕೈ ಚಂದ್ರನತ್ತ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕಾದಂಬರಿ ಇಂಗ್ಲಿಷ್‌ಗೆ ಅನುವಾದಗೊಂಡಿದೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರಗೊಂಡಿದೆ. ಜಾನಪದಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. 'ಕಾಲುದಾರಿಯ ಕಥನಗಳು' ಅವರ ಜಾನಪದ ಕ್ಷೇತ್ರ ಕಾರ್ಯದ ಅನುಭವ ಕಥನವಾಗಿದೆ.